**I/105704/2021**

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕುಟುಂಬ ಯೋಜನೆಯಲ್ಲಿ ಕುಟುಂಬಗಳನ್ನು ದಾಖಲಿಸುವ ಬಗ್ಗೆ

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 254 ಇಜಿವಿ 2019, ದಿನಾಂಕ: 28.08.2019
2. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 126 ಇಜಿಎಂ 2020, ದಿನಾಂಕ: 05.12.2020
3. ಆಯವ್ಯಯ ಭಾಷಣ 2021-22
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ : 11.06.2021ರಂದು ನಡೆದ ದತ್ತಾಂಶ ಆಡಳಿತ ಚಾಲನಾ ಸಮಿತಿ ಸಭೆಯ ನಡವಳಿ ,

ಪ್ರಸ್ತಾವನೆ :

ಕುಟುಂಬ ಗುರುತಿನ ಸಂಖ್ಯೆಯ ಯೋಜನೆಯನ್ನು (ಕುಟುಂಬ ಯೋಜನೆ) 2018-19ರ ಆಯವ್ಯಯ ಭಾಷಣದ ಕಂಡಿಕೆ 146 ರಲ್ಲಿ ಘೋಷಿಸಿದಂತೆ ಮೇಲೆ ಓದಲಾದ (1)ರ ದಿನಾಂಕ: 28.08.2019ರ ಆದೇಶದಂತೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಯಿತು. ಪ್ರಾಯೋಗಿಕ ಹಂತದಯಶಸ್ವಿಯಾದ ಹಿನ್ನಲೆಯಲ್ಲಿ, ಮೇಲೆ ಓದಲಾದ (2)ರ ದಿನಾಂಕ: 05.12.2020ರ ಆದೇಶದಂತೆ ಸದರಿ ಯೋಜನೆಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲಾಯಿತು. ರಾಜ್ಯದ ನಾಗರಿಕರಿಗೆ ಸ್ವಯಂಚಾಲಿತ ಸೌಲಭ್ಯ ಹಾಗೂ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಲಭ್ಯವಿದ್ದ ದತ್ತಾಂಶವನ್ನು, ಇತರೆ ಇಲಾಖೆಗಳ ಲಭ್ಯವಿರುವ ಐ.ಟಿ. ವ್ಯವಸ್ಥೆಗಳ ದತ್ತಾಂಶದೊಂದಿಗೆ ಸಂಯೋಜಿಸಿ, ಸಮಗ್ರ ಕೇಂದ್ರೀಕೃತ ದತ್ತಾಂಶ ನಿಧಿಯನ್ನು ಸೃಜಿಸಲಾಗಿದೆ. ಮೇಲೆ ಓದಲಾದ (3)ರ 2021-22 ರ ಆಯವ್ಯಯ ಭಾಷಣದಲ್ಲಿ, ಈಗಾಗಲೇ ಸೃಜಿಸಲಾದ ಕುಟುಂಬ ಗುರುತಿನ ಸಂಖ್ಯೆಯ ವ್ಯವಸ್ಥೆಯನ್ನು ಸಾಮಾಜಿಕ ರೆಜಿಸ್ಟ್ರಿ ಒಳಗೊಂಡ ಸಮಗ್ರ ಸಾಮಾಜಿಕ ಭದ್ರತಾ ವ್ಯವಸ್ಥೆಯಾಗಿ ಅಭಿವೃದ್ಧಿಪಡಿಸಲಾಗುವುದು ಮತ್ತು ಈ ವ್ಯವಸ್ಥೆಯನ್ನು ಬಳಸಿಕೊಂಡು ಅರ್ಹತಾ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ತಿಳಿಸಿದೆ. ಸಮಗ್ರ ಸಾಮಾಜಿಕ ಭದ್ರತಾ ವ್ಯವಸ್ಥೆಯ ಸೃಜನೆಯ

ಪ್ರಕ್ರಿಯೆಯಲ್ಲಿ, ಪಡಿತರ ವ್ಯವಸ್ಥೆಯಲ್ಲಿರದ ನಾಗರಿಕರಿಗೆ, ಕುಟುಂಬ ವ್ಯವಸ್ಥೆಯಲ್ಲಿ ದಾಖಲಾಗಿ, ನೋಂದಾಯಿಸುವ ಸೌಲಭ್ಯ ಒದಗಿಸ ಬೇಕೆಂಬುದನ್ನು ಮನಗಾಣಲಾಗಿದೆ. ಮುಂದುವರೆದು, ಪಡಿತರ ವ್ಯವಸ್ಥೆಯು ಮನೆಯನ್ನು (households) ಗುರುತಿಸುತ್ತಿದ್ದು, ಇಲಾಖಾ ಯೋಜನೆಗಳಲ್ಲಿ ಕುಟುಂಬವನ್ನು ಒಂದು ಘಟಕವಾಗಿ ಪರಿಗಣಿಸುತ್ತಿರುವುದು ಕಂಡು ಬಂದಿದೆ. ಇಲಾಖೆಗಳು ತಮ್ಮ ಯೋಜನೆಗಳ ಮಾನದಂಡಗಳನ್ವಯ ಅರ್ಹ ಕುಟುಂಬಗಳನ್ನು ಗುರುತಿಸಲು ಅನುವಾಗುವಂತೆ, ಕುಟುಂಬ ಯೋಜನೆಯಲ್ಲಿ ಕುಟುಂಬಗಳನ್ನು ದಾಖಲಿಸುವ ಅವಶ್ಯಕತೆಯನ್ನು ಗುರುತಿಸಲಾಗಿದೆ. ಈ ಅಂಶಗಳನ್ನು ದತ್ತಾಂಶ ಆಡಳಿತ ಚಾಲನಾ ಸಮಿತಿಯ 2ನೇ ಸಭೆಯಲ್ಲಿ ಮಂಡಿಸಿದ್ದು, ಸಮಿತಿಯು ಮೇಲೆ ಓದಲಾದ(4) ರ ದಿನಾಂಕ:11-06-2021ರ ನಡವಳಿಯಂತೆ ಕುಟುಂಬಗಳನ್ನು ಕುಟುಂಬ ವ್ಯವಸ್ಥೆಯಲ್ಲಿ ದಾಖಲಿಸುವ ಪ್ರಸ್ತಾಪಿತ ಪ್ರಕ್ರಿಯೆಯನ್ನು ಅನುಮೋದಿಸಿದೆ.

ಆದ್ದರಿಂದ, ಸಮಗ್ರ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಕುಟುಂಬ ಯೋಜನೆಯಲ್ಲಿ ವ್ಯಾಪ್ತಿಯಲ್ಲಿರದ ನಾಗರಿಕರು ತಮ್ಮ ಕುಟುಂಬಗಳನ್ನು ರಚಿಸುವ ಪ್ರಕ್ರಿಯೆಯನ್ನು ಸೂಚಿಸಬೇಕಾಗಿದೆ. ಅದರಂತೆ, ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 47 ಪಿಆರ್‌ಜೆ 2021, ಬೆಂಗಳೂರು, ದಿನಾಂಕ : 06.07.2021</u>**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಕುಟುಂಬ ಯೋಜನೆಯ ಉದ್ದೇಶಕ್ಕಾಗಿ, ಸರ್ಕಾರವು ಈ ಕೆಳಕಂಡಂತೆ ಅನುಮೋದನೆ ನೀಡಿದೆ:

1. ರಾಜ್ಯದ ಯಾವುದೇ ನಾಗರಿಕರು ತನ್ನ ಪತಿ/ಪತ್ನಿ ಮತ್ತು ಅವಿವಾಹಿತ ಮಕ್ಕಳ ವಿವರಗಳನ್ನು ಒದಗಿಸುವ ಮೂಲಕ ಕುಟುಂಬ ವ್ಯವಸ್ಥೆಯಲ್ಲಿ ದಾಖಲಾಗಬಹುದು. ಅರ್ಜಿಸಲ್ಲಿಸುತ್ತಿರುವ ನಾಗರಿಕರು ತನ್ನ ಕುಟುಂಬದ ಇತರೆ ಸದಸ್ಯರನ್ನು ಸಹ ಸೇರಿಸಬಹುದಾಗಿದೆ. ಈ ಕೆಳಕಂಡ ವ್ಯಕಿಗಳೂ ಸಹ ಕುಟುಂಬ ವ್ಯವಸ್ಥೆಯಲ್ಲಿ ದಾಖಲಾಗಬಹುದು

    i. ಏಕ ಸದಸ್ಯರಾಗಿರುವ ವಿಧವೆ / ವಿಧುರ / ನಿರ್ಗತಿಕ / ಪೋಷಕರಿಲ್ಲದ ಅವಿವಾಹಿತ ಅನಾಥರು.

ii. ಪೋಷಕರು ಮರಣ ಹೊಂದಿದ ಕಾರಣ ವಿವಾಹಿತ ಸಹೋದರ/ಸಹೋದರಿಯ ಜೊತೆ ವಾಸವಾಗಿರುವ ಅವಿವಾಹಿತ ಸಹೋದರ / ಸಹೋದರಿ.

iii. ಪೋಷಕರು ಮರಣ ಹೊಂದಿದ ಕಾರಣ ಒಟ್ಟಿಗೆ ವಾಸವಾಗಿರುವ ಅವಿವಾಹಿತ ಸಹೋದರ/ಸಹೋದರಿಯರು

2. ಕುಟುಂಬ ಯೋಜನೆಯಡಿ ದಾಖಲಿಸಲು ಸಲ್ಲಿಸಲಾದ ಅರ್ಜಿ/ಮನವಿಗಳನ್ನು ಸಲ್ಲಿಸುವ ನಾಗರಿಕರ ಅರ್ಜಿಗಳ ಪರಿಶೀಲನೆ ಹಾಗೂ ಅನುಮೋದನೆಯನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯ ಕೆಳಕಂಡ ಅಧಿಕಾರಿಗಳು ಮಾಡತಕ್ಕದ್ದು :

| ಇಲಾಖೆ | ಪರಿಶೀಲನಾಧಿಕಾರಿ | ಅನುಮೋದನಾಧಿಕಾರಿ |
|---|---|---|
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ | ಗ್ರಾ.ಪಂ. ಕಾರ್ಯದರ್ಶಿ | ಪಂಚಾಯತ ಅಭಿವೃದ್ಧಿ ಅಧಿಕಾರಿ |
| ನಗರಾಭಿವೃದ್ಧಿ ಇಲಾಖೆ | ಕಂದಾಯ ನಿರೀಕ್ಷಕ | ಸಹಾಯಕ ಕಂದಾಯ ಅಧಿಕಾರಿ / ಕಂದಾಯ ಅಧಿಕಾರಿ |

3. ಕುಟುಂಬ ಯೋಜನೆಯಡಿ ದಾಖಲಿಸಲು ಸಲ್ಲಿಸಲಾದ ಅರ್ಜಿ/ಮನವಿಗಳ ಪರಿಶೀಲನೆ ಹಾಗೂ ಅನುಮೋದನೆಯನ್ನು ಸಕಾಲ ವ್ಯಾಪ್ತಿಗೆ ಕೆಳಕಂಡ ಕಾಲಾವಧಿಯೊಂದಿಗೆ ಸೇರ್ಪಡಿಸುವುದು

| | |
|---|---|
| ಪೂರಕ ದಾಖಲೆಗಳೊಂದಿಗೆ ಸಲ್ಲಿಸಲಾದ ಅರ್ಜಿಯ ಇತ್ಯರ್ಥ | 3 ದಿನಗಳು |
| ಸ್ವಘೋಷಣೆಯೊಂದಿಗೆ ಸಲ್ಲಿಸಲಾದ ಅರ್ಜಿಯ ಇತ್ಯರ್ಥ | 7 ದಿನಗಳು |

4. ಕುಟುಂಬ ರಚನೆಯ ಪ್ರಕ್ರಿಯೆ, ದಾಖಲಾಗಲು ನಾಗರಿಕರು ಸಲ್ಲಿಸಬೇಕಾದ ಮಾಹಿತಿ, ಕುಟುಂಬದಲ್ಲಿ ಸೇರಿಸಬಹುದಾದ ಸಂಬಂಧಿಗಳು, ವಿನಾಯತಿ ನಿರ್ವಹಣೆ ವಿಧಾನಗಳು, ಈಗಾಗಲೇ ದಾಖಲಿರುವ ಕುಟುಂಬಗಳ ವಿವರಗಳಲ್ಲಿ ಬದಲಾವಣೆ, ಪರಿಶೀಲನೆ ಹಾಗೂ ಅನುಮೋದನೆಯಲ್ಲಿ ಪಾಲಿಸ ಬೇಕಾದ ಪ್ರಕ್ರಿಯೆ ಕುರಿತು ವಿವರವಾದ ಮಾರ್ಗಸೂಚಿಯನ್ನು

ಹೊರಡಿಸುವ ಅಧಿಕಾರವನ್ನು ಸಿಬ್ಬಂದಿ ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಗೆ ಪ್ರತ್ಯಾಯೋಜಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎಂ.ಎನ್.ಶ್ರೀವತ್ಸ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಇ-ಆಡಳಿತ)

**ಇವರಿಗೆ**:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 50 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

ಪ್ರತಿ:
1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ವಿಧಾನಸೌಧ / ವಿಕಾಸಸೌಧ / ಬಹುಮಹಡಿ ಕಟ್ಟಡ, ಬೆಂಗಳೂರು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ – ಸಂಬಂಧಪಟ್ಟ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ

7. ಎಲ್ಲಾ ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳು - ಸಂಬಂಧಪಟ್ಟ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ
8. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿ ಕಟ್ಟಡ, ಬೆಂಗಳೂರು.
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಮುಖಾಂತರ.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
12. ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
13. ಶಾಖಾ ರಕ್ಷ ಕಡತ.

## Proceedings of Govt of Karnataka

Subject : Registering Families in Kutumba Project –reg.

Read :

1. Government Order No : DPAR 254 EGV 2019, dated : 28.08.2019
2. Government Order No: DPAR 126 EGM 2020,dated : 05.12.2020
3. Budget Speech of 2021-22
4. Proceedings of the of Data Governance Steering Committee meeting held under the Chairmanship of Additional Chief Secretary to Government dated: 11.06.2021

Preamble :

Family ID project (Kutumba) was announced in the Budget speech of 2018-19 at para 146 and vide Government Order dated:28-08-2019 read at (1) above it was implemented on pilot basis in Sriranghapatna taluk of Mandya district. On successful implementation of the pilot project, the project was extended to the state vide Government Order dated:05-12-2020 read at (2) above. The data available in Public Distribution System (PDS) was integrated with data available in other department IT systems and a comprehensive central data repository created to enable Departments to suo-moto extend benefits and services to the citizen. Government in its budget speech of 2021-22 read at ref (3) above announced that Family ID created would be developed into an Integrated Social Protection System (ISPS) consisting of a social registry and an Entitlement Management System would be implemented using this system. During the process of development of ISPS, the need to provide an option for residents, who are not in the PDS, to enroll and register in Family ID was realized. Additionally, it was noted that PDS consists of Households where as various department schemes consider Family as a unit. Therefore the requirement of enrolling families in Kutumba for enabling Departments to identify the eligible Families as per their scheme guidelines was realised. The proposed mechanism for enrolling and registering in Kutumba was approved by the Steering Committee on Data Governance vide its Proceedings dated:11-06-2021 read at ref (4) above.

Therefore, in order to effectively implement the ISPS, it is considered necessary to prescribe the process of creation of Family by the residents not covered in Family ID. Hence, this order.

**Government OrderNo. : DPAR 47 PRJ 2021,**
**Bengaluru, Dated :06 .07.2021**

In view of the reasons explained in the Preamble above, for the purpose of Kutumba (Family ID) Project, Government approves the following:

1. Any citizen would be able to register in Kutumba by providing information relating to his/her spouse and all unmarried children. However, at the discretion of the resident applying, the family may include other relatives also. The following are also allowed to be registered:

    i. Single members like widow/widower/destitute/unmarried orphan(s) without parents.
    ii. Unmarried brother/sister living with a married sibling as parents are deceased.
    iii. Unmarried siblings living together as parents are deceased.

2. Rural Development and Panchayat Raj Department and Urban Development Department Officials indicated below would carry out verification and approval of request of residents for adding their family in Kutumba:

| Department | Verifier | Approver |
|---|---|---|
| Rural Development and Panchayat Raj Department | Gram Panchayat Secretary | Panchayat Development Officer |
| Urban Development Department | Revenue Inspector | Assistant Revenue Officer/Revenue Officer |

3. To include the service of verification and approval under SAKALA as per the below given timelines:

| | |
|---|---|
| Applications submitted with Supporting documents | 3 days |
| Applications submitted with Self-declaration | 7 days |

4. To authorise Department of Personnel and Administrative Reforms (e-Governance) to issue a detailed guidelines defining the mechanism of creating a family, the information to be submitted by resident, the relations that can be added to the family, exception handling mechanism, modifications to existing family and the process of verification and approval to be followed.

By order and in the name of the
Governor of Karnataka

**(M.N.Srivatsa)**
Under Secretary to Government,
Department of Personnel and Administrative
Reforms (e-Governance)

To:
The Compiler, Karnataka Gazette for publication in the next issue of the Special Gazette and supply 50 copies to this Department.

Copy to:

1. The Chief Secretary to Government, Vidhana Soudha, Bengaluru.
2. The Additional Chief Secretary to Government to Chief Minister, Vidhana Soudha, Bengaluru.
3. The Additional Chief Secretary to Government and Development Commissioner, Vidhana Soudha, Bengaluru.
4. The Additional Chief Secretary to Government, Vidhana Soudha, Bengaluru.
5. All the Additional Chief Secretary / Principal Secretary / Secretary to Government, Vidhana Soudha / Vikasa Soudha, M.S. Building, Bengaluru.
6. All the Heads of Department- through the concerned Department Additional Chief Secretary / Principal Secretary / Secretary to Government.
7. All Boards / Corporations/ Autonomous bodies - through the concerned Department Additional Chief Secretary / Principal Secretary / Secretary to Government.
8. The Chief Executive Officer, Centre for e-Governance, M.S. Building, Bengaluru.

9. All the Deputy Commissioners / Chief Executive Officers, Zilla Panchayat- through the Chief Executive Officer, Centre for e-Governance.
10. The Private Secretary to Additional Chief Secretary to Government, Department of Personnel and Administrative Reforms (e-Governance). M.S. Building, Bengaluru.
11. The Personal Assistant to Additional Secretary to Government, Department of Personnel and Administrative Reforms (e-Governance) M.S. Building, Bengaluru.
12. For publication in Departmental website.
13. Section guard file.